ಈ) ವಿದ್ಯುದ್ದೀಕರಣವಾಗಿರುವ ಗ್ರಾಮಗಳಲ್ಲಿ ಬಾಕಿ ಉಳಿದಿರುವ ಮನೆಗಳಿಗೆ ಅರ್ಜಿಗಳು ಬಂದಂತೆಲ್ಲಾ ವಿದ್ಯುತ್ ಒದಗಿಸಲಾಗುವುದು ಬಾಕಿ ಉಳಿದಿರುವ ಗ್ರಾಮಗಳಿಲ್ಲವನ್ನೂ ಏಳನೇ ಪಂಚ ವಾರ್ಷಿಕ ಯೋಜನೆಯ ಅವಧಿಯಲ್ಲಿ ವಿದ್ಯುದ್ದೀಕರಣ ಮಾಡುವ ಗುರಿ ಇದೆ. ಇದು ಮಂಡಳಿಯ ಸಂಪನ್ಮೂಲವನ್ನು ಅವಲಂಬಿಸಿರುತ್ತದೆ.

ರಾಜ್ಯದಲ್ಲಿರುವ ಉಗ್ರಾಣಿಗಳ ಸಂಬಳದಲ್ಲಿನ ತಾರತಮ್ಯದ ಬಗ್ಗೆ.

೯೫೪ ಶ್ರೀ ಆರ್. ಎನ್. ನಾಯ್ಕ(ಭಟ್ಕಳ).—ಕಂದಾಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಜ್ಯದಲ್ಲಿ ಉಗ್ರಾಣಿ (ಗ್ರಾಮಲೆಕ್ಕಿಗಳ ಸಿಪಾಯಿ) ಗಳ ಸಂಖ್ಯೆ ಎಷ್ಟು, ಹಾಗೂ ತಲಾ ಅವರಿಗೆ ಪ್ರತಿದಿವಸ ಸಂಬಳ ಎಷ್ಟು ?

ಆ) ಸರ್ಕಾರದವರು ನಿರ್ಧರಿಸಿದ ಪ್ರತಿ ಕೂಲಿಯ ಸಂಬಂಳಕ್ಕಿಂತ ಉಗ್ರಾಣಿಗಳ ಪ್ರತಿ ದಿವಸದ ಸಂಬಳ ಕಡಿಮೆ ಇರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಇ) ಇವರಿಗೆ ಸಂಬಂಳ ಹೆಚ್ಚಿಸುವ ಬಗ್ಗೆ ಬೇಡಿಕೆಗಳು ಸರ್ಕಾರದವರ ಮುಂದಿದೆಯೇ ?

ಈ) ಹಾಗಿದ್ದಲ್ಲಿ ಆ ಬಗ್ಗೆ ಸರ್ಕಾರದವರು ಕೈಕೊಂಡ ಕ್ರಮವೇನು ?

ಶ್ರೀ ಎಸ್. ಆರ್. ಬೊಮ್ಮಾಯಿ(ಕಂದಾಯ ಮಂತ್ರಿಗಳು).—

ಅ) ೧೦,೪೫೦. ತಿಂಗಳಿಗೆ ೧೨೦–೦೦ ರೂಪಾಯಿಗಳ ನಿಗದಿತ ಸಂಭಾವನೆ ಪಾವತಿ ಮಾಡ ಲಾಗುತ್ತಿದೆ.

ಆ) ಬಂದಿದೆ,

ಇ) ಸಂಭಾವನೆಯನ್ನು ಹೆಚ್ಚಿಸುವ ಬಗ್ಗೆ ಬೇಡಿಕೆಗಳು ಸರ್ಕಾರಕ್ಕೆ ಬಂದಿವೆ.

ಈ) ಈ ಪ್ರಶ್ನೆಯು ಸರ್ಕಾರದ ಪರಿಶೀಲನೆಯಲ್ಲಿದೆ.

ಸಂಡೂರ ತಾಲ್ಲೂಕಿಂ ಕಛೇರಿ ಕಟ್ಟಡ ಕಟ್ಟಿಸುವ ಬಗ್ಗೆ

೧೩೫೯ ಶ್ರೀ ಯು. ಭೂಪತಿ(ಸಂಡೂರು).—ಮಾನ್ಯ ಕಂದಾಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ ?

ಅ) ಸಂಡೂರಿನಲ್ಲಿ ತಾಲ್ಲೂಕಿಂ ಕಛೇರಿಗೆ ಸ್ವಂತ ಕಟ್ಟಡ ಇಲ್ಲದಿರುವುದಿಂ ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಆ) ತಾಲ್ಲೂಕಿಂ ಕಛೇರಿಯ ಕಟ್ಟಡವನ್ನು ಈ ವರ್ಷದಲ್ಲಿಯೇ ಆದ್ಯತೆಯ ಮೇರೆಗೆ ಕಟ್ಟಲು ಸರ್ಕಾರದವರು ಕ್ರಮ ತೆಗೆದುಕೊಳ್ಳುವರೆ,

ಇ) ತಾಲೂಕಿಂ ಕಛೇರಿಯ ಕಟ್ಟಡಕ್ಕೆ ತಗಲುವ ಅಂದಾಜು ವೆಚ್ಚವೆಷ್ಟು ?

ಶ್ರೀ ಎಸ್. ಆರ್. ಬೊಮ್ಮಾಯಿ(ಕಂದಾಯ ಮಂತ್ರಿಗಳು).—

ಅ) ಹೌದು

ಆ) ಇಲ್ಲ.

ಇ) ರೂ. ೨೧.೬೦ ಲಕ್ಷ

ವಿದ್ಯುತ್ ಜೋತಾದಿಂದ ಕೈಗಾರಿಕೆಗಳಿಗೆ ಆಗಿರುವ ತೆ ಂದರೆಗಳ ನಿವಾರಣೆ ಎಂದು?

೧೨೨೪ ಶ್ರೀ ಪಂಪಾಪತಿ(ದಾವಣಗೆರೆ).— ಮಾನ್ಯ ವಿದ್ಯುತ್, ಗಣಿ ಹಾಗೂ ಭೂ ವಿಜ್ಞಾನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ವಿದ್ಯುಚ್ಛಕ್ತಿ ಅಭಾವದಿಂದ ದೊಡ್ಡ ಕೈಗಾರಿಕೆಗಳಿಗೆ ಭಾರಿ ತೊಂದರೆಗಳಾಗಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಆ) ಈ ತೊಂದರೆ ನಿವಾರಿಸಲು ಸರ್ಕಾರದವರು ಏನು ಕ್ರಮ ಕೈಗೊಂಡಿದ್ದಾರೆ,

ಶ್ರೀ ಜೆ. ಎಸ್. ದೇಶಮುಖ್(ವಿದ್ಯುತ್, ಗಣಿ ಮತ್ತು ಭೂ ವಿಜ್ಞಾನ ಮಂತ್ರಿಗಳು),

ಅ) ಗಮನಕ್ಕೆ ಬಂದಿದೆ.

ಆ) ವಿದ್ಯುಚ್ಛಕ್ತಿ ಅಭಾವ ನಿವಾರಣೆಗೆ ಸರ್ಕಾರ ಕೈಗೊಂಡ ಕ್ರಮಗಳನ್ನು ಈ ಕೆಳಕಂಡಂತೆ ನಮೂದಿಸಿದೆ,

1) ನಮ್ಮ ರಾಜ್ಯಕ್ಕೆ ಕೇಂದ್ರ ಯೋಜನೆಗಳಿಂದ ಬರಬೇಕಾದ ವಿದ್ಯುಚ್ಛಕ್ತಿ ಪಾಲನ್ನು ಪಡೆಯುತ್ತಿದ್ದೇವೆ ಮತ್ತು ಇನ್ನೂ ಅಲಾಟ್ ಮಾಡದೆ ಇರುವ ಶೇಕಡಾ ೧೫ನ್ನು ನಮ್ಮ ರಾಜ್ಯಕ್ಕೆ ಕೊಡುವಂತೆ ಕೇಳಿಕೊಂಡಿದ್ದೇವೆ.

2) ನೆರೆ ರಾಜ್ಯಗಳಿಂದ ಹೆಚ್ಚಿನ ವಿದ್ಯುಚ್ಛಕ್ತಿಯನ್ನು ಆಮದು ಮಾಡಿಕೊಳ್ಳಲು ಪ್ರಯತ್ನಿಸಲಾಗಿದೆ.

3) ಖಾಸಗಿಯವರಿಗೆ ಸಣ್ಣ ಜಲವಿದ್ಯುತ್ ಯೋಜನೆಗಳನ್ನು ದೀರ್ಘಾವಧಿವರೆಗೆ ಗುತ್ತಿಗೆಗೆ ಕೊಡಲಾಗುತ್ತಿದೆ.

4) ವಿದ್ಯುಚ್ಛಕ್ತಿ ಉತ್ಪಾದನೆಯನ್ನು ಹೆಚ್ಚಿಸಲು ಡೀಸಲ್ ಜನರೇಟರ್ ಮೇಲೆ ಕಟ್ಟುವ ವಾಣಿಜ್ಯ ತೆರಿಗೆಯ ಮನ್ನಾ

5) ವಿದ್ಯುತ್ ಉತ್ಪಾದನೆಗೆ ಉಪಯೋಗಿಸುವ ಡೀಸಲ್ ಎಣ್ಣೆಯ ಮೇಲೆ ಮಾರಾಟ ತೆರಿಗೆ ಮನ್ನಾ

6) ವಿದ್ಯುತ್ ಸಾಗಣೆ ಮತ್ತು ಹಂಚಿಕೆಯಲ್ಲಿನ ನಷ್ಟವನ್ನು ಕಡಿಮೆ ಮಾಡಲು ಸೂಕ್ತ ಕ್ರಮಗಳು.

7) ರಾಯಚೂರು ಶಾಖೋತ್ಪನ್ನ ಕೇಂದ್ರ ಮತ್ತು ಇತರ ವಿದ್ಯುತ್ ಯೋಜನೆಗಳ ಕೆಲಸಗಳ ನಿರ್ವಹಣೆಯನ್ನು ವೇಗಗೊಳಿಸಲಾಗುವುದು.

8) ಶರಾವತಿ ಟೇಲ್ ರೇಸ್ ಯೋಜನೆಗೆ ಕೇಂದ್ರ ಸರ್ಕಾರದ ಅನುಮತಿಯನ್ನು ಕೋರಲಾಗಿದೆ

9) ವಿದ್ಯುತ್ ಪೂರೈಕೆಯನ್ನು ಹೆಚ್ಚಿಸುವ ಸಲುವಾಗಿ ೩೩ ಮೆ. ವ್ಯಾ. ಸಾಮರ್ಥ್ಯದ ೪ ಡೀಸೆಲ್ ವಿದ್ಯುತ್ ಉತ್ಪಾದನಾ ಘಟಕಗಳನ್ನು ಸ್ಥಾಪಿಸಲು ಉದ್ದೇಶಿಸಲಾಗಿದೆ.

10) ೧೨೦ ಮೆ. ವ್ಯಾ. ಸಾಮರ್ಥ್ಯದ ಡೀಸಲ್ ಸ್ಥಾವರ ವಿದ್ಯುತ್ ಉತ್ಪಾದನಾ ಘಟಕವನ್ನು ಬೆಂಗಳೂರಿನ ಹತ್ತಿರ ಸ್ಥಾಪಿಸಲು ಯೋಜಿಸಲಾಗಿದೆ,

11) ಮಂಗಳೂರಿನಲ್ಲಿ ವಿವಿಧ ಇಂದನಗಳ ಶಾಖೋತ್ಪನ್ನ ಕೇಂದ್ರವನ್ನು ಸ್ಥಾಪಿಸಲು ಪ್ರಯತ್ನಗಳನ್ನು ಮಾಡಲಾಗುತ್ತಿದೆ.

12) ಮೇಲ್ಕಂಡ ಯೋಜನೆಗಳಲ್ಲದೆ ಕೇಂದ್ರ ಸರ್ಕಾರ ಅಣು ವಿದ್ಯುತ್ ಉತ್ಪಾದನಾ ಕೇಂದ್ರವನ್ನು (ಮೊದಲ ಹಂತ ೨x೨೫೦ ಮೇಗವ್ಯಾಟ್) ಉತ್ತರ ಕನ್ನಡ ಜಿಲ್ಲೆಯ ಕೈಗಾ ಎಂಬ ಪ್ರದೇಶದಲ್ಲಿ ಸ್ಥಾಪಿಸಲು ಕಾರ್ಯಕ್ರಮ ಪ್ರಾರಂಭ ಮಾಡಲಾಗಿದೆ.

ಗ್ರಾಮ ಸಹಾಯಕರ ವೇತನದ ಬಗ್ಗೆ.

೧೦೬೪ ಶ್ರೀ ಕೆ. ವಸಂತ ಬಂಗೇರ.—ಮಾನ್ಯ ಕಂದಾಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಗ್ರಾಮ ಸಹಾಯಕರಿಗೆ ತಿಂಗಳಿಗೆ ಕೇವಲ ರೂ.೧೨೦.೦೦ ವೇತನ ನೀಡಿ ದುಡಿಸಿಕೊಳ್ಳುವುದು ಜೀತಪದ್ಧತಿಯಲ್ಲಿದೆ.